ಜೆಎಸ್ಎಸ್ ಮಹಾವಿದ್ಯಾಪೀಠ

# ಜೆಎಸ್ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ `ಬಿ' ಮಾನ್ಯತೆ ಪಡೆದಿದೆ

ಕೊಳ್ಳೇಗಾಲ - 571 440, ಚಾಮರಾಜನಗರ ಜಿಲ್ಲೆ

☎: 08224-252149   🖷: 08224-256051   Email: jsscwk@gmail.com   www.jsscwkgl.org

**ಪ್ರಕಟಣೆ ಕೃಪೆಗಾಗಿ**

**ಸ್ವಚ್ಛ ಭಾರತ ಗಾಂಧೀಜಿಯವರ ಕನಸಾಗಿತ್ತು ಪ್ರೊ ಉಮೇಶ**

**ಜೆಎಸ್ಎಸ್ ಮಹಿಳಾ ವಸತಿನಿಲಯದ ವಿದ್ಯಾರ್ಥಿನಿಯರಿಂದ ಸ್ವಚ್ಛತಾ ಕಾರ್ಯಕ್ರಮ**

ಕೊಳ್ಳೇಗಾಲ: 26-09-2018 ಸ್ವಚ್ಛ ಬಾರತ ರಾಷ್ಟ್ರಪತಿ ಮಹಾತ್ಮ ಗಾಂಧೀಜಿಯವರ ಕನಸಿನ ಕೂಸಾಗಿತ್ತು ಎಂದು ಪ್ರಾಚಾರ್ಯ ಪ್ರೊ ಉಮೇಶ ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ಮಹಿಳಾ ವಸತಿ ನಿಲಯದ ವಿದ್ಯಾರ್ಥಿನಿಯರಿಂದ ಇದೇ ಅಕ್ಟೋಬರ್ ೨ ರಂದು ಆಚರಿಸುವ ಮಹಾತ್ಮ ಗಾಂಧೀಜಿಯವರ ೧೫೦ನೆಯ ಜಯಂತಿ ಅಂಗವಾಗಿ ಆಯೋಜಿಸಿದ್ದ ಸ್ವಚ್ಛತೆಯ ಸೇವೆ ಕಾರ್ಯಕ್ರಮದಡಿಯಲ್ಲಿ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು.

ಮಹಾತ್ಮ ಗಾಂಧೀಜಿಯವರ ಕನಸಿನ ಕೂಸಾಗಿದ್ದ ಸ್ವಚ್ಛ ಭಾರತದ ಸಂಪೂರ್ಣ ಸಹಕಾರಕ್ಕಾಗಿ ಕೈ ಜೋಡಿಸುವುದು ನಮ್ಮ ನಿಮ್ಮೆಲ್ಲರ ಹಾಗೂ ಪ್ರತಿಯೊಬ್ಬ ನಾಗರೀಕರ ಆಧ್ಯ ಕರ್ತವ್ಯವಾಗಿದೆ. ಜಪಾನ್ ದೇಶ ಮುಂದುವರಿಯುವಲ್ಲಿ ಆ ದೇಶದಲ್ಲಿ ಸ್ವಚ್ಛತೆಗೆ ನೀಡುವ ಪ್ರತಿಯೊಬ್ಬರ ಪ್ರಾಧಾನ್ಯತೆಯೇ ಕಾರಣ. ಸ್ವಚ್ಛತೆಯಿಂದ ಆರೋಗ್ಯ, ಸ್ವಚ್ಛತೆ ಮತ್ತು ಉತ್ತಮ ಆರೋಗ್ಯದಿಂದ ಸಧೃಡ ದೇಶ ನಿರ್ಮಾಣ ಸಾಧ್ಯ ಎಂಬುದಕ್ಕೆ ಜಪಾನ್ ದೇಶವೇ ಉದಾಹರಣೆ. ಆ ದೇಶದಂತೆ ನಮ್ಮಲ್ಲಿಯೂ ಶಾಲಾ ಕಾಲೇಜಿನ ಪಠ್ಯಕ್ರಮದಲ್ಲಿ ಸ್ವಚ್ಛತೆ ವಿಷಯವನ್ನು ಕಡ್ಡಾಯ ಮಾಡಬೇಕಿದೆ. ಪಠ್ಯ ಕ್ರಮದ ಅರ್ಧಭಾಗದಷ್ಟು ಸ್ವಚ್ಛತೆ, ಆರೋಗ್ಯ, ಯೋಗ, ಕ್ರೀಡೆ, ಸಂಸ್ಕೃತಿ ಹಾಗೂ ಇತರೆ ಸಹಪಠ್ಯ ವಿಷಯಗಳನ್ನು ಅಳವಡಿಸುವುದರಿಂದ ವಿದ್ಯಾರ್ಥಿಗಳ ಪರಿಪೂರ್ಣ ವ್ಯಕ್ತಿತ್ವ ವಿಕಸನ ಸಾಧ್ಯ. ಈ ದಿಶೆಯಲ್ಲಿ ಶಿಕ್ಷಣ ಪರಿಣಿತರು ಹಾಗೂ ಸರ್ಕಾರ ಯೋಚಿಸುವಂತಾಗಬೇಕು ಎಂದು ತಿಳಿಸುತ್ತ ವಿದ್ಯಾರ್ಥಿನಿಯರಿಗೆ ಸ್ವಚ್ಛತಾ ಕಾರ್ಯದಲ್ಲಿ ಪ್ರೀತಿ ಪೂರ್ವಕವಾಗಿ ಪಾಲ್ಗೊಳ್ಳಿ ನಿಮ್ಮ ನಿಮ್ಮ ಕೊಠಡಿ, ವಸತಿ ನಿಲಯ ಹಾಗೂ ಕ್ಯಾಂಪಸ್‌ನ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದರಿಂದ ನಿಮ್ಮ ಮನಸ್ಸು ಉಲ್ಲಾಸಗೊಳ್ಳುವುದರಿಂದ ಓದುವುದರಲ್ಲಿ ತಲ್ಲೀನರಾಗಬಹುದಾಗಿದೆ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವಸತಿ ನಿಲಯ ಪಾಲಕರಾದ ಶ್ರೀಮತಿ ಮಹೇಶ್ವರಿ ಭೂಗೋಳಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಶ್ರೀಮತಿ ಸ್ಮಿತಾ ಹಾಗೂ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ವಸತಿ ನಿಲಯದ ವಿದ್ಯಾರ್ಥಿನಿಯರು ಉಪಹಾರ ಕೊಠಡಿಯ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿರುವುದು



ವಸತಿ ನಿಲಯದ ವಿದ್ಯಾರ್ಥಿನಿಯರು ನಿಲಯದ ಮುಂಭಾಗ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವುದು



ವಸತಿ ನಿಲಯದ ವಿದ್ಯಾರ್ಥಿನಿಯರು ನಿಲಯದ ಆವರಣವನ್ನು ಮುಂಭಾಗ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವುದು

